ಮೈಸೂರ ಗೆಜೆಟ್.

ಸಂ. 44.] ಸರ್ಕಾರದಿಂದ ಪ್ರಾಯಿಷ್ ಆದ್ದು. [ಸಂ. 28.

ಬೆಂಗಳೂರು, ಗುರುವಾರ, ಜುಲೈ ತಾ॥ 15, ಸಕ್ 1909.

II ನೆ ಬಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ಮೊದಲಾದವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ತಂಗಡಿ ಮತ್ತು ಕಕ್ಕೆಚಕ್ಕೆಗಳ ಇಸ್ತಿಹಾರ್.

ತಾರೀಖು 26ನೆ ಜೂನ್ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ತಂಗಡಿ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1909ನೆ ಜುಲೈ ತಿಂಗಳು ತಾರೀಖು 19 ವರಿಗೆ ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸಿನಲ್ಲಿ ದರಖಾಸ್ತುಗಳು ಹೆಗ್ಗದುಕೊಳ್ಳಲ್ಪಡುವದು.

ನಂಬರು	ತಾಲ್ಲೂಕು.	ಜಮಾಯಿಸತಕ್ಕ ಕಾಲ.	ಷರಾ.
1	ಅರಸೀಕೆರೆ ...	1909ನೆ ಜುಲೈ ತಾರೀಖು 25ರ ಲಾಗಾಯಿತು 1911ನೆ ಜೂನ್ ತಾರೀಖು 30ರ ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ ಸರ್ವ ಮಾನ್ಯ, ಕಂದಾಯ ಮತ್ತು ಹಿಡುವಳಿಯಲ್ಲಿನ ಇರುವ ಇತರ ಭೂಮಿಗಳಲ್ಲಿನ ಫಸಲು ಈ ಹರಾಜಿಗೆ ಸೇರಿರುವದಿಲ್ಲ.
2	ಚನ್ನರಾಯಪಟ್ಟಣ ...		
3	ಹಾಸನ-ಆಲೂರು ಸಬ್ ತಾ॥ ಸೇರಿ...		
4	ಬೇಲೂರು ...		
5	ಮಂಜರಾಬಾದ್ ...		
6	ಅರಕಲಗೂಡು ...		
7	ಹೊಳೇನರಸೀಪುರ ...		

2. ತಾಲ್ಲೂಕು ಹೆಸರು ಮತ್ತು ದರಖಾಸ್ತು ಮಾಡಲ್ಪಟ್ಟ ಮೊಬಲಗು ಸಹ ದರಖಾಸ್ತುಗಳಲ್ಲಿ ನಮೂದಿಸಬೇಕು.

3. ಪ್ರತಿ ಬಂದು ದರಖಾಸ್ತಿನೊಡನೆ (200) ರೂಪಾಯಿನ ಕರೆನ್ಸಿ ನೋಟ್ ಕೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ತಿರಸ್ಕರಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರ್ ಮತ್ತು ಇನ್‌ಷೂರ್ ಮಾಡಿ ಲಿಫಾಪೆಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಮತ್ತು ಹಾಸನ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ಬರದು ರವಾನಿಸಬೇಕು.

4. ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ತಾಲ್ಲೂಕು ಕಚೇರಿಯಲ್ಲಿ 1909ನೆ ಇಸವಿ ಜುಲೈ ತಾರೀಖು 21ರಲ್ಲು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹಾಜರು ಇರುವ ದರಖಾಸ್ತುದಾರರ ರೂಬರೂಬು ದರಖಾಸ್ತುಗಳನ್ನು ಒಡಿಯುವರು.

5. ಮೇಲ್ಕಂಡ ಆಫಿಸರು ಯಾವ ಅರ್ಜಿವಾ ಎಲ್ಲಾ ದರಖಾಸ್ತುಗಳನ್ನು ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಪೂರ್ತಿಕೊಂಡಿರುತ್ತಾರೆ. ದರಖಾಸ್ತು ಅಂಗೀಕರಿಸೋಣವು ಡೆಪ್ಯೂಟಿ ಕಮಿಷನರವರ ಮಂಜೂರಾತಿಗೆ ಬಳಪಡುತ್ತೆ.

6. ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರಿ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ಮೊಬಲಗನ್ನು ಕೂಡ್ಲೆ ಮಾಪಸ್ ಮಾಡಲ್ಪಡುವದು.

7. ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರ್ರಿಗೆ ತಿಳಿಸಿದ 3 ದಿವಸಗಳ ಒಳಗಾಗಿ ದರಖಾಸ್ತು ಮೊಬಲಗು ಪೈಕಿ ಮೊದಲು ತೇವಣಿ ಮೊಬಲಗು ಸೇರಿ ಅರ್ಧ ಭಾಗವನ್ನು ಮತ್ತು ಇದರ ಮೇಲೆ ರೂಪಾಯಿ 1ಕ್ಕೆ ಬಂದಾಣಿಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನಿಗೆ ಪಾರಖಾವಣೇ ಮಾಡಬೇಕು. ಮತ್ತು ಈ 3 ದಿನಗಳಲ್ಲಿ ಈ ಹೇಳಿದಾ ರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನು ರದ್ದುಮಾಡಿ ತೇವಣಿ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರೇ ಹರಾಜು ಮಾಡಲ್ಪಡುವದು.

8. ಈರೀತಿ ದುಸರಾ ಹರಾಜು ನಡಿಸುವದ್ದರಿಂದ ಉಂಟಾಗುವ ಖಾಯಿದೆಗೆ ಮೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ. ಆದರೆ ಇದಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ಮೊಬಲಗನ್ನು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

9. ದರಖಾಸ್ತುದಾರ್ರು ತಮಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗಮಾಡಿಕೊಡಲು ಇಷ್ಟ ಪಟ್ಟಲ್ಲಿ ಅದಕ್ಕಾಗಿ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನು ಪಡೆಯಬೇಕು. ವರ್ಗರಾಜೀನಾವೆಯನ್ನು ಅಂ ಗೀಕರಿಸುವದಕ್ಕೆ ಮುಂಚೆ ಇಜಾರೆ ಮೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವಯನ್ನು ವಸೂಲ್ಮಾಡಲು ಡೆಪ್ಯೂಟಿ ಕಮಿಷನರ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

10. ಇಜಾರೆದಾರನು ಗುತ್ತಾ ಮೊಬಲಗಿನ ಬಾಕಿಯನ್ನು ಮತ್ತು ಅದರ ಮೇಲೆ ಆಗುವ ಲೋಕಲ್ ಸೆಸ್ ಸಹ ಸಮನಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಿಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲಿ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಜಕ್ಕೆಗಳ ಜವಾವಣೇ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ಮೊಬಲಗಿನ ಬಾಕಿ ಯಾವತ್ತನ್ನೂ ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದುಮಾಡಲಾಗೀತು.

1ನೆ ಖಿಸ್ತು—1ನೆ ಅಕ್ಟೋಬರ್ 1909.
2ನೆ ಖಿಸ್ತು—1ನೆ ಏಪ್ರಿಲ್ 1910.
3ನೆ ಖಿಸ್ತು 5ನೆ ಜನವರಿ 1911.

ಇತರ ಷರತ್ತುಗಳು.

(i) ಇಜಾರೆದಾರನ ನೌಕರನೆ ಆಗಲಿ ಪಿಕ್ಕಿ ಕಂಟ್ರಾಕ್ಟರೆ ಆಗಲಿ ಎಳೇ ಗಿಡಗಳನ್ನು ಕಡಿಯದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(ii) ಜಕ್ಕೆ ಜವಾವಣೆ ಪಡಿಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಪಿಕ್ಕಿ ಕಂಟ್ರಾಕ್ಟರುಗಳ ಹೆಸರು ನಮೂದುನಿಂದ ಬಂದು ತಖ್ತೆಯನ್ನು ಕೊಡಬೇಕು.

(iii) ಕಕ್ಕೆ ಗಿಡಗಳನ್ನು ನೆಲಸಮನಾಗಿ ಕಡಿಯತಕ್ಕದ್ದು.

(iv) ಇಜಾರೆ ಮೇರೆ ರಫ್ತು ಮಾಡಲ್ಪಡುವ ತೊಗಟೆ ಅಥವಾ ತೊಗಟೆ ರಹಿತವಾದ ಮರದ ಪ್ರಮಾಣ ವಗೈರೆ ಕಾಣುವ ಲೆಕ್ಕುಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಕ್ಕುವನ್ನು ಡೆಪ್ಯೂಟಿ ಕಮಿಷನರಾಗಲಿ ಅಥವಾ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರಾಗಲಿ ಅವರುಗಳಿಂದ ನೇಮಿಸಲ್ಪಟ್ಟ ಇತರ ಆಫಿಸರಾಗಲಿ ತನಿಖೆಗೆ ಬಂದಾಗ ಅವುಗಳನ್ನು ತಾಜಪರ್ಡಿಸತಕ್ಕದ್ದು.

(v) ಸಾಗಿಸಿಕೊಂಡು ಹೋಗುವ ಪ್ರತಿ ಬಂದು ಗಾಡಿ ಬೋಜಾ ತೊಗಟೆಗೂ ಕಂಟ್ರಾಕ್ಟರು ಯಾ ಫಿಜಂಟೆದಾರನಿಂದ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಮೊಹರನಿಶಿ ಪಡದ ಪ್ರಿಂಟ್ ಫಾರಂ ಬುಕ್ಕಿನಲ್ಲಿ ಪ್ಯಾಸ್ ಕೊಡಲ್ಪಡತಕ್ಕದ್ದು. ಅಂಥಾ ಬುಕ್ಕು ಮುಗಿದುಹೋದನಂತರ ಸದರಿ ಆಫಿಸರಿಗೆ ವಾಪಸು ಮಾಡಬೇಕು.

(vi) ಕಂಟ್ರಾಕ್ಟರು ಅಥವಾ ಆತನ ಕಡೆ ಜನಗಳ ಅಶ್ರದ್ಧೆಯಿಂದ ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇಷನ್‌ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು. ಮತ್ತು ಅದರಿಂದ ಉಂಟಾಗುವ ನಷ್ಟಕ್ಕೆ ಜವಾಬ್ದಾರನಾಗತಕ್ಕದ್ದು.

(vii) 1911ನೆ ಇಸವಿ ಜುಲೈ ತಾರೀಖು 15 ರೊಳಗಾಗಿ (ಅಂದರೆ ರಿಯಾಯಿತಿ 15 ದಿನಗಳು ಶೇರಿ) ಇಜಾರೆ ಮೇರೆ ವಾಯಿದೇಲಿ ಕಡದು ಜವಾವಣಿ ಮಾಡಿ ದಾಸ್ತಾ ಮಾಡಿರುವ ಎಲ್ಲಾ ಜಕ್ಕೆಯನ್ನು ಹಾಸನ ಡಿಸ್ಟ್ರಿಕ್ಟ್ ಸೆರಹದ್ದಿನ ಹೊರಗೆ ರಫ್ತು ಮಾಡಿಕೊಳ್ಳತಕ್ಕದ್ದು.

(viii) ಮೇಲೆ ನಮೂದಾಗುವ ಎಲ್ಲಾ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರೆದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡುವದಲ್ಲದೆ ಅದುವರಿಗೆ ಜವಾಯಿಸಿರುವ ವಿಶಿಷ್ಟ ಜಕ್ಕೆಯನ್ನು ಸರ್ಕಾರಕ್ಕೆ ದಂಡವಾಗಿ ತೆಗದುಕೊಂಡು ಡೆಪ್ಯೂಟಿ ಕಮಿಷನರವರು ವಿಧಿಸಬಹುದಾದ 1,000 ರೂಪಾಯಿ ವರಿಗಿನ ಜುರ್ಮಾನೆಗೆ ಇಜಾರೆದಾರ ಗುರಿಯಾಗಬೇಕು.

(ix) ತೊಗಟೆ ತೆಗದ ಸೌದೆ ಇಜಾರೆದಾರನದಾಗಿರುತ್ತೆ.

ಇಸ್ತಿಹಾರ್.

ತಾರೀಖು 3ನೆ ಜುಲೈ 1909.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಹಾಸನ ಡಿಸ್ಟ್ರಿಕ್ಟ್ ಎಲ್ಲಾ ತಾಲ್ಲೂಕುಗಳ ಸ್ಟೇಟ್ ಫಾರೆಸ್ಟ್ ಡಿಸ್ಟ್ರಿಕ್ಟ್ ಜಂಗಲ್‌ಗಳು ಮತ್ತು ಎಲ್ಲಾ ಸರ್ಕಾರಿ ಬಂಜರು ಜಮೀನ್‌ಗಳಲ್ಲಿ ದೊರಿಯುವ ಫಾರೆಸ್ಟ್ ಪಸಾರೆ ಜಿನಸಿಗಳನ್ನು 1909–1910ನೆ ಸಾಲಿಗೆ ಜಮಾಯಿಸಿ ತಗದುಕೊಂಡು ಹೋಗುವ ಹಕ್ಕನ್ನು ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಬಹಿರಂಗವಾಗಿ ತಾಲ್ಲೂಕುವಾರಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಅಥವಾ ರೇಂಜಾಫಿಸರವರು ಮತ್ತು ಆಯಾಯ ತಾಲ್ಲೂಕು ಅಮಲ್ದಾರ್ರರೊಂದಿಗೆ ಈ ಕೆಳಗೆ ವಿವರಿಸಿ ಇರುವ ಮೇರೆ ಆಯಾಯ ತಾಲ್ಲೂಕು ಹೆಡ್ ಕ್ವಾರ್ಟರಿನಲ್ಲಿ ಹರಾಜು ಮಾಡಿಸಲಾಗುತ್ತೆ :—

ನಂಬರು.	ತಾಲ್ಲೂಕು.	ಹರಾಜು ತಾರೀಖು.
1	ನುಂಜರಾಬಾದ್	26—7—1909
2	ಬೇಲೂರು	24—7—1909
3	ಅರಕೀಕರೆ	22—7—1909
4	ಚನ್ನರಾಯಪಟ್ಟಣ	25—7—1909
5	ಹೊಳೇನರಸೀಪುರ	2—8—1909
6	ಅರಕಲ್‌ಗೂಡ್	4—8—1909
7	ಹಾಸನ ಆಲೂರು ಸಬ್ ತಾಲ್ಲೂಕು ಕೇರಿ ...	28—7—1909

2. ಛಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆಯೇ ಹರಾಜು ಮೊಬಲಗಿನ ಕಾಲು ಹಿಸ್ಸೆ ಮೊಬಲಗನ್ನು ಕೇವಣಿಯಾಗಿ ಹಾಜರ್ಮಾಡಬೇಕು. ಹಾಗೆ ಕೊಡಲು ತಪ್ಪಿದಲ್ಲಿ ಬಾಬು ಪುನಹ ಹರಾಜು ಮಾಡಲ್ಪಡುವದು. ಮೇಲ್ಕಂಡಂತೆ ನಡಿಸುವ ದುಸರಾ ಹರಾಜಿನಲ್ಲಿ ಉಂಟಾಗುವ ನಷ್ಟಕ್ಕೆ ಅವಲ್ ಛಡ ದರಖಾಸ್ತುದಾರನು ಗುರಿಯಾಗತಕ್ಕದ್ದು. ದುಸರೇ ಹರಾಜಿನಲ್ಲಿ ಜಾಸ್ತಿ ಮೊಬಲಗು ಉತ್ಪತ್ತಿಯಾದಲ್ಲಿ ಅಂಥಾ ಜಾಸ್ತಿ ಮೊಬಲಗಿಗೆ ಅವಲ್ ಛಡ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲ.

3. ಹರಾಜು ಮೊಬಲಗಿಗೆ ರೂಪಾಯಿಗೆ ಬಂದಾಣೆಯಂತೆ ಲೋಕಲ್ ಸೆಸ್ ಸಹಾ ಕೊಡಬೇಕು.

4. ಬಾಕಿ ಮುಕ್ಕಾಲು ಹಿಸ್ಸೆ ಮೊಬಲಗನ್ನು ಹರಾಜು ತಾರೀಖು ಲಾಗಾಯಿತು 15 ದಿವಸದಲ್ಲಿ ಕೊಡಬೇಕು. ಹಾಗೆ ಕೊಡುವದರಲ್ಲಿ ತಪ್ಪಿದರೆ ಡಿಪಾಜಿಟ್ ಮೊಬಲಗನ್ನು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳುವದರಲ್ಲಿ ಬರುತ್ತೆಯಲ್ಲದೆ ಮೇಲ್ಕಂಡ 2ನೆ ಪ್ಯಾರಾದಲ್ಲಿ ಕಂಡಂತೆ ಕ್ರಮ ಜರಿಗಿಸಲ್ಪಡುವದು.

5. ಕಂಟ್ರಾಕ್ಟುದಾರನು ಇನಾಂದಾರ್‌ಗಳಿಗೆ ಇರುವ ಯಾವದೊಂದು ಹಕ್ಕಿಗೂ ಕುಂದಕ ಉಂಟುಮಾಡಕೂಡದು.

6. (a) 1ನೆ ಪ್ಯಾರಾದಲ್ಲಿ ಕಂಡ ಇಜಾರೆಯು ಜಂಗಲ್‌ವಾರ್ ಅಥವಾ ಹೋಬಳಿವಾರ್ ಗುತ್ತಿಗೆ ಕೊಡುವದಕ್ಕೆ ಸಾಕಾದಷ್ಟು ಮುಖ್ಯ ಕಾರಣವಿದ್ದು ಹೆಚ್ಚು ದರಖಾಸ್ತುದಾರು ಅಪೇಕ್ಷಿಸಿದ ವಿನಹ ತಾಲ್ಲೂಕ ವಾರಾಗಿಯೇ ಗುತ್ತಿಗ್ಯೆ ಕೊಡಲಾಗುತ್ತೆ. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ ಲಿಖಿತಮೂಲಕವಾದ ಅಪ್ಪಣೆ ವಿನಹ ಪಿಕವಿ ಇಜಾರೆ ಮಾಡಕೂಡದು.

(b) ಜಮಾವಣೇ ಕೆಲಸದಲ್ಲಿ ವಿಜಂಟರು ಅಥವಾ ನೌಕರರು ನಡೆಸುವ ಕೃತ್ಯಗಳಿಗೆ ಇಜಾರೆದಾರ್ರೇ ಖುದ್ದು ಜವಾಬ್ದಾರರಾಗಿರುತ್ತಾರೆ.

ಹರಾಜು ಆಗುವ ಪಸಾರೆ ಜಿನಸಿಗಳ ಪಟ್ಟಿ.

ಸಂಖ್ಯೆ.	ಜಿನಸಿ ಹೆಸರು.	ಸಂಖ್ಯೆ.	ಜಿನಸಿ ಹೆಸರು.
1	ಜೇನುಮೇಣ	15	ಬೇಲದ ಹಂಣು
2	ಸೀಗೇಕಾಯಿ	16	ವಾಟೆ ಹುಳಿ
3	ಗೇರುಬೀಜ	17	ದಾಲಚಿನ್ನಿ
4	ಗೋಂದು	18	ಬೆಂಡೇನಾರು
5	ಹೊಂಗೇಬೀಜ	19	ಕಾಡಹಿಪ್ಪೇಬೀಜ
6	ಕಾಡಜಗಜೆಬೀಜ	20	ಬೂರಗದಹತ್ತಿ
7	ಅಂಟುವಾಳದಕಾಯಿ	21	ತಾರೇಕಾಯಿ
8	ಕಕ್ಕೇಕಾಯಿ	22	ಕೃಪಿಲಾರಂಗು
9	ಹೆಣಸೇಹಂಣು	23	ಬಿಂಡು
10	ಕಾಡುಹರಳು	24	ಬಳಾಪಿನ ಕಲ್ಲು
11	ನಸ್ಯಾಣಿ ವೊಗ್ಗು	25	ರಾಮಪತ್ರೆ ರಾಮಗೋಟು
12	ಹಾಲುಮಡ್ಡಿ	26	ಪಪ್ಪಳೀಚಕ್ಕೆ
13	ಜೋಳಾರ್‌ಬೊಬ್ಬಜೆ	27	ನೋವೆಚಕ್ಕೆ
14	ಹುರುಗಲಬೀಜ		

ಬಿ. ಐ. ಶ್ಯಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.